ಅಧ್ಯಕ್ಷರು — ಪ್ರಸ್ತಾವ ಏನೆಂದರೆ, ಕರ್ನಾಟಕ ಪತ್ರಿಕಾ ಸ್ವಾತಂತ್ರ್ಯ ವಿಧೇಯಕ ೧೯೮೮ ಮಂಡಿಸಲು ಅನುಮತಿ ನೀಡಬೇಕು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪತ್ರಿಕಾ ಸ್ವಾತಂತ್ರ್ಯ ವಿಧೇಯಕ ೧೯೮೮ ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ. *

ಕರ್ನಾಟಕ ಶಾಸಕಾಂಗ(ಅಧಿಕಾರ, ವಿಶೇಷ ಸ್ಥಾನಮಾನ ಹಾಗೂ ಉನ್ಮುಕ್ತಿಗಳ) ವಿಧೇಯಕ ೧೯೮೮

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

"೧೯೮೮ನೇ ಇಸವಿಯ ಕರ್ನಾಟಕ ಶಾಸಕಾಂಗ (ಅಧಿಕಾರ, ವಿಶೇಷ ಸ್ಥಾನಮಾನ ಹಾಗೂ ಉನ್ಮುಕ್ತಿಗಳ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು'—ಪ್ರಸ್ತಾವ ಏನೆಂದರೆ,

"೧೯೮೮ನೇ ಇಸವಿಯ ಕರ್ನಾಟಕ ಶಾಸಕಾಂಗ (ಅಧಿಕಾರ ವಿಶೇಷ ಸ್ಥಾನಮಾನ ಹಾಗೂ ಉನ್ಮುಕ್ತಿಗಳ) ವಿಧೇಯಕವನ್ನು" ಮಂಡಿಸಲು ಅನುಮತಿ ನೀಡಬೇಕು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ ಲಕ್ಷ್ಮೀಸಾಗರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ "೧೯೮೮ನೇ ಇಸವಿಯ ಕರ್ನಾಟಕ ಶಾಸಕಾಂಗ (ಅಧಿಕಾರ, ವಿಶೇಷ ಸ್ಥಾನಮಾನ ಹಾಗೂ ಉನ್ಮುಕ್ತಿಗಳ) ವಿಧೇಯಕವನ್ನು" ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ *

ಮಂತ್ರಿಯವರಿಂದ ಹೇಳಿಕೆ

ತುಂಗಭದ್ರಾನಾಲೆಯ ದುರಸ್ತಿ ಬಗ್ಗೆ

ಅಧ್ಯಕ್ಷರು.—ದೇವೇಗೌಡರೆ, ತಮ್ಮ ಸ್ಟೇಟ್‌ಮೆಂಟ್‌ನ್ನು ಕೊಡಬಹುದು.

† ಶ್ರೀ ಹೆಚ್. ಡಿ ದೇವೇಗೌಡ (ಮಾನ್ಯ ಲೋಕೋಪಯೋಗಿ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ ಈ ಸದನದ ಗಮನಕ್ಕೆ ತರಬಹಕ್ಕ ಬಹಳ ಪ್ರಾಮುಖ್ಯವಾದ ವಿಚಾರ ಎಂದರೆ ತುಂಗಭದ್ರಾ ಎಡದಂಡೆ ನಾಲೆಯು ಮೊನ್ನೆ ೨೯ನೇ ತಾರೀಖು ರಾತ್ರಿ ಸುಮಾರು ೧ ಗಂಟೆ ಸಮಯದಲ್ಲಿ ಬ್ರೀಚ್ ಆದಮೇಲೆ ನಾವು ರಿಪೇರಿ ಕೆಲಸದ ಬಗ್ಗೆ ತೀವ್ರವಾಗಿ ವ್ಯವಸ್ಥೆ ಮಾಡಿದ್ದು ೩ನೇ ತಾರೀಖಿನೊಳಗಾಗಿ ನೀರನ್ನು ಕೊಡಬೇಕೆಂದು ನಮ್ಮ ಅಧಿಕಾರಿಗಳಿಗೆ ತಾಕೀತು ಮಾಡಿದ್ದೇ ಆದ್ದರಿಂದ ನೈಟ್ ಶಿಫ್ಟ್‌ನಲ್ಲಿ ಕೆಲಸ

---

* Annexure

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಬೇಕೆಂದು ಹೇಳಿದ್ದೇವೆ. ೧೨೦ ಜನ ಲೇಬರರ್ಸ್ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ೭೦ ಮೆಷಿನರಿಗಳನ್ನು ಬೇರೆ ಬೇರೆ ಡಿವಿಜನ್‌ಗಳಿಂದ ತರಿಸಿ ತೂಬಿನ ಕೆಲಸ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಎಲ್ಲ ಸೀನಿಯರ್ಸ್ ಆಫೀಸರ್ಸ್ ಕೂಡ ಅಲ್ಲಿದ್ದಾರೆ, ರೈತ ಸಂಘದವರ ಹೆಸರಿನಲ್ಲಿ ಸುಮಾರು ೭೦ ಜನರು ಲಾರಿಯನ್ನು ತೆಗೆದುಕೊಂಡು ಹೋಗಿ ಆ ಅಧಿಕಾರಿಗಳ ಮೇಲೆ ಅಟ್ಯಾಕ್ಟ್ ಮಾಡಿ ಕೆಲಸ ನಿಲ್ಲಿಸಿ ಒಂದು ರೀತಿಯ ಅನಾಗರೀಕವಾಗಿ ಅವರು ನಡೆದುಕೊಂಡಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ ಬಹುಶಃ ಅವರ ಉದ್ದೇಶ ೧೨ನೇ ತಾರೀಖಿನೊಳಗೆ ಸುಮಾರು ಮೂರುವರೆ ಲಕ್ಷ ಜವಿಾನಿನಲ್ಲಿ ಹಾಲಿ ಇರತಕ್ಕ ಬೆಳೆಯನ್ನು ಉಳಿಸುವುದಕ್ಕೆ ೧೦ ಲಕ್ಷ ರೂಪಾಯಿ ವೆಚ್ಚಮಾಡಿ ೧೦ ದಿವಸದಲ್ಲಿ ಆ ರಿಪೇರಿ ಕೆಲಸವನ್ನು ಮುಗಿಸಿ ಆ ಬೆಳೆಯನ್ನು ಉಳಿಸಬೇಕೆಂದು ನಾವು ಏನು ಗಲಿಬಿಲಿಯನ್ನು ಇಟ್ಟುಕೊಂಡಿದ್ದೇವೆ ಅದನ್ನು ಏನಾದರೂ ಮಾಡಿ ವಿಫಲ ಮಾಡಬೇಕು ರೈತರನ್ನು ಈ ಸರ್ಕಾರದ ವಿರುದ್ಧ ಎತ್ತಿಕಟ್ಟಬೇಕೆಂದು ಏನಾದರೂ ಮಾಡುತ್ತಿದ್ದಾರೋ ಏನೋ ನನಗೆ ಗೊತ್ತಿಲ್ಲ.

ಆದ್ದರಿಂದ ನಾನು ಈ ಸದನದ ಮುಖಾಂತರ ಹೇಳಲಿಕ್ಕೆ ಬಯಸುತ್ತೇನೆ, ಈ ರೀತಿ ರೈತರ ಸಂಘದ ಹೆಸರಿನಲ್ಲಾಗಲಿ ರೈತರ ಹೆಸರಿನಲ್ಲಾಗಲಿ ಕೆಲವು ಶಕ್ತಿಗಳು ಬಂದು ಸರ್ಕಾರದವರು ತೆಗೆದುಕೊಂಡಿರತಕ್ಕ ಕೆಲಸದ ಬಗ್ಗೆ ಜನರಲ್ಲಿ ಸಂಶಯವನ್ನು ಮೂಡಿಸುವ ದಿಕ್ಕಿನಲ್ಲಿ ಏನು ಪ್ರಯತ್ನ ಮಾಡುತ್ತಿದ್ದಾರೆ ಅದರ ಬಗ್ಗೆ ಸರ್ಕಾರ ಅಷ್ಟೇ ತೀವ್ರತರವಾದ, ಕಾಠಿಣ್ಯಕರವಾದ ಕ್ರಮವನ್ನು ತೆಗೆದುಕೊಂಡು ಎದುರಿಸಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಇಷ್ಟು ಮಾತ್ರ ಹೇಳಲಿಕ್ಕೆ ಬಯಸುತ್ತೇನೆ, ರೈತರು ಇದಕ್ಕೆ ಸಹಕಾರವನ್ನು ನೀಡಬೇಕು. ರೈತ ಸಂಘದವರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ರೈತರ ಬಗ್ಗೆ ಸರ್ಕಾರದ ಕಳಕಳಿ ಏನಿದೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು. ೩.೫ ಲಕ್ಷ ಎಕರೆ ಜವಿಾನಿನಲ್ಲಿ ಇರತಕ್ಕ ಬೆಳೆಯನ್ನು ಉಳಿಸಬೇಕೆಂಬ ಇಚ್ಛೆ ನಮಗಿದೆ. ಈ ಸಂದರ್ಭದಲ್ಲಿ ಮಾನ್ಯ ಗೃಹ ಮಂತ್ರಿಗಳಲ್ಲಿಯೂ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ ತಾವು ಸಂಬಂದಪಟ್ಟ ಎಸ್.ಪಿ ಮತ್ತು ಡಿ.ಸಿ.ಗಳಿಗೆ ಇನ್‌ಸ್ಟ್ರಕ್ಷನ್ಸ್ ಕೊಡಬೇಕು. ಅಲ್ಲಿ ಯಾರೇ ಆಗಲಿ ಬಂದುಅಡಚಣೆಯನ್ನುಂಟು ಮಾಡಿದರೆ, ಕಾನೂನನ್ನು ಪಾಲನೆ ಮಾಡುವುದಕ್ಕೆ ಗೌರವವನ್ನು ಕೊಡದಿದ್ದರೆ ಅಂಥ ವ್ಯಕ್ತಿಗಳು ಎಷ್ಟೇ ದೊಡ್ಡವರಿರಲಿ ಅವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶವನ್ನು ಸರ್ಕಾರದವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರಕ್ಕೆ ಕೆಟ್ಟಹೆಸರನ್ನು ತರಬೇಕೆಂಬ ಕಾನ್ಸ್‌ಪಿರೆಸಿ ಇಲ್ಲಿ ಇದ್ದಹಾಗೆ ಕಾಣಿಸುತ್ತದೆ. ಆದ್ದರಿಂದ ನಾನು ರೈತರಲ್ಲಿ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಸರ್ಕಾರದ ಬಗ್ಗೆ ಅವರು ಭರವಸೆಯನ್ನು ಇಡಲಿ, ೧೨ನೇ ತಾರೀಖಿಗೆ ಎಂಥ ಕಷ್ಟವೇ ಬರಲಿ ರೈತರಿಗೆ ನಾವು ನೀರನ್ನು ಕೊಡುತ್ತೇವೆ. ಸ್ವಾಮಿ ಆ ಜನರು ಚೀಫ್ ಇಂಜಿನಿಯರ್‌ರವರ ಮೇಲೆ ಕೈ ಮಾಡುವುದಕ್ಕೆ ಹೋಗಿದ್ದಾರೆ. ಚೀಫ್ ಇಂಜಿನಿಯರ್‌ರವರು ನನಗೆ ರಾತ್ರಿ ೨ ಗಂಟೆಯಲ್ಲಿ ಫೋನ್ ಮಾಡಿ ನಾವು ಕೆಲಸವನ್ನು ಮಾಡುವುದಿಲ್ಲ, ಕೆಲಸವನ್ನು ನಿಲ್ಲಿಸಿ ಬಿಡುತ್ತೇವೆ, ನಾವುಸ್ಪಾಟ್‌ಗೆ ಹೋಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇಷ್ಟೇ ಅಲ್ಲ, ಆ ಜನರು ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಮೇಲೂ ಕೂಡ ಕೈ ಮಾಡುವುದಕ್ಕೆ ಹೋಗಿದ್ದಾರೆಂದರೆ ಅವರು ಏನು ಮಾಡಬೇಕು? ಈ ಸದನದ ಮುಖಾಂತರ ನಾನು ರೈತರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ರೈತರು ನಮಗೆ ಸಹಕಾರವನ್ನು ಕೊಡಬೇಕು, ಸರ್ಕಾರದ ಭರವಸೆಯ ಬಗ್ಗೆ ನಂಬಿಕೆ ಇಡಬೇಕು. ಅವರು ಇಟ್ಟಿರತಕ್ಕ ಬೆಳೆ ಒಣಗಿಹೋಗುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಇನ್ನು ೧೦ ದಿವಸದಲ್ಲಿ ಅವರಿಗೆ ನೀರನ್ನು ಕೊಡುತ್ತೇವೆ. ಮಾನ್ಯ ಅಧ್ಯಕ್ಷರೆ, ಈಗ ರೈತ ಸಂಘದ ಹೆಸರಿನಲ್ಲಿ ನಡೆಯುತ್ತಿರುವ ಗಲಾಟೆಯನ್ನು ತಡೆಗಟ್ಟುವುದಕ್ಕೆ ಸೂಕ್ತ ಬಂದೋಬಸ್ತು ಮಾಡಬೇಕು, ಸಾಧ್ಯವಾದರೆ ಮಾನ್ಯ ಬಸವರಾಜರವರೂ ಅಲ್ಲಿಗೆ ಹೋಗಿ ಕ್ಯಾಂಪ್ ಮಾಡಲಿ. ಅಲ್ಲಿಯ ಎಸ್.ಪಿ.ಯವರು ಕೇವಲ ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಕಳುಹಿಸಿಕೊಟ್ಟರೆ ಅವರು ಬಂದು ಏನು ಮಾಡುವುದಕ್ಕಾಗುತ್ತದೆ, ಆ ೭೦ ಜನರೂ ಬಂದು ಬಡಿಗೆಗಳನ್ನು ಹಿಡಿದುಕೊಂಡು ನಿಂತರೆ ಈ ಕಾನ್‌ಸ್ಟೇಬಲ್‌ಗಳು ಏನ್ನು ಮಾಡುವುದಕ್ಕಾಗುತ್ತದೆ ? ಸರ್ಕಾರ ತಾನೆ ಏನು ಮಾಡುವುದಕ್ಕಾಗುತ್ತದೆ ? ಆದ್ದರಿಂದ ಮಾನ್ಯ ಗೃಹ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಅಲ್ಲಿಯ ಎಸ್.ಪಿ ಯವರಿಗೆ ತಕ್ಷಣ ಫೋನ್ ಮಾಡಿ ಅಲ್ಲಿ ಸೂಕ್ತ ಬಂದೋಬಸ್ತನ್ನು ಮಾಡುವಂತೆ ಆದೇಶ ನೀಡಬೇಕು. ಈಗಾಗಲೇ ರಿಪೇರಿ ಕೆಲಸಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ೧೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ೧೨ನೇ ತಾರೀಖಿನೊಳಗಾಗಿ ನೀರನ್ನು ಕೊಡುವುದಕ್ಕೆ ಸರ್ಕಾರ ಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಂಡಿದೆ ಎನ್ನುತಕ್ಕ ಭರವಸೆಯನ್ನು ನಾನು ಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ

ಎಷ್ಟು ಸಹಕಾರವನ್ನು ಕೊಡಬೇಕೋ ಅಷ್ಟನ್ನೂ ಕೂಡ ನಾವು ಕೊಡುತ್ತೇವೆ ಎಂದು ಹೇಳ ಬಯಸುತ್ತೇನೆ.

ಅಧ್ಯಕ್ಷರು.— ಈಗ ೬೦ನೇ ನಿಯಮದ ಪ್ರಕಾರ ಮಾನ್ಯ ಬಿ. ಎಸ್. ಯಡಿಯೂರಪ್ಪನವರು ೧೦-೧೫ ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನನಗೆ ಇನ್ನೂ ಪೂರ್ಣ ಮಾಹಿತಿ ಬಂದಿಲ್ಲ. ಒಂದು ಗಂಟೆ ಕಾಲಾವಕಾಶಬೇಕಾಗುತ್ತದೆ. ದಯವಿಟ್ಟು ಒಂದು ಗಂಟೆಯಾದ ಮೇಲೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ಹಾಗಿದ್ದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರವನ್ನು ಪ್ರಾರಂಭಿಸಬಹುದು.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಮುಖ್ಯಮಂತ್ರಿಯವರಿಂದ ಉತ್ತರ

ಅಧ್ಯಕ್ಷರು,— ಈಗ ಮಾನ್ಯ ಮುಖ್ಯಮಂತ್ರಿಯವರು. ತಮಗೆ ಅನಾರೋಗ್ಯದ ನಿಮಿತ್ತ ಎದ್ದು ನಿಂತು ಮಾತನಾಡಲು ಸಾಧ್ಯವಾಗದಿದ್ದಲ್ಲಿ ಕುಳಿತುಕೊಂಡೇ ಉತ್ತರವನ್ನು ಕೊಡಬಹುದು.

† ಶ್ರೀ ರಾಮಕೃಷ್ಣ ಹೆಗಡೆ.— ಕುಳಿತುಕೊಂಡೆ ಮಾತನಾಡಬೇಕಾಗುತ್ತದೆ. ಈಗ ಸ್ವಲ ಹೊತ್ತು ಎದ್ದು ನಿಂತು ಮಾತನಾಡುತ್ತೇನೆ. ಆಗತ್ಯಬಿದ್ದರೆ ತಮ್ಮ ಪರವಾನಿಗೆಯನ್ನು ತೆಗೆದುಕೊಂಡು ಕುಳಿತುಕೊಂಡು ಮಾತನಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಸಲದ ನಮ್ಮ ರಾಜ್ಯಪಾಲರ ಭಾಷಣದ ಮೇಲೆ, ವಂದನಾರ್ಪಣೆಯ ಗೊತ್ತುವಳಿಯ ಮೇಲೆ ಚರ್ಚೆ ಒಂದು ವಿಚಿತ್ರ ರೀತಿಯಲ್ಲಿ ಆಯಿತು. ನಾವು ಈ ವಿಷಯದ ಮೇಲೆ ಚರ್ಚೆಗೋಸ್ಕರವಾಗಿ ವಿರೋಧಪಕ್ಷದ ಮಾನ್ಯ ಸ್ನೇಹಿತರಿಗೆ ಎಷ್ಟು ಸಮಯವನ್ನು ಕೇಳಿದರೋ ಅಷ್ಟು ಸಮಯವನ್ನು ಕೊಡಲು ಒಪ್ಪಿಕೊಂಡಿದ್ದೆವು, ಆದರೆ ಈ ವಿಷಯ ಈ ಮನೆಯಮುಂದೆ ಬಂದನಂತರ ವಿಷಯಕ್ಕೆ ಸಂಬಂಧಪಡದಂಥ ಅನೇಕ ಬೇರೆ ಬೇರೆ ವಿಷಯಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರ ಸದಸ್ಯರು ಯಾವುದಾದರೂ ಒಂದು ರೀತಿಯಲ್ಲಿ ತರಲಿಕ್ಕೆ ಪ್ರಯತ್ನ ಮಾಡಿದರು. ವ್ಯವಹಾರಿಕವಾಗಿ ಸರ್ಕಾರದ ನೀತಿಗೆ, ಸರ್ಕಾರದ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಯಾವುದೇ ವಿಚಾರವನ್ನು ಚರ್ಚೆ ಮಾಡುವ ಅಧಿಕಾರ ಈ ಮನೆಯ ಪ್ರತಿಯೊಬ್ಬ ಸದಸ್ಯರಿಗೂ ಇರುತ್ತದೆ. ಮತ್ತು ಅಂಥ ಚರ್ಚೆ ಬೆಚು ಮನಸ್ಸಿನಿಂದ ಆಗಬೇಕೆನ್ನುವುದು ಕೂಡ ನಮ್ಮ ಇಷ್ಟ. ಪ್ರಜಾಪ್ರಭುತ್ವದ ಅರ್ಥವೇ ಚರ್ಚೆಯ ಮುಖಾಂತರ ಆಡಳಿತವನ್ನು ನಡೆಸುವುದು. ಮತ್ತು ಇದರಲ್ಲಿ ಸಂಪೂರ್ಣವಾದ ವಿಶ್ವಾಸವನ್ನು ಇಟ್ಟಿರುವ ಪಕ್ಷದವರು ನಾವು, ಆದ್ದರಿಂದ ಚರ್ಚೆಗೆ ಅವಕಾಶವನ್ನು ಸಾಕಷ್ಟು ಕೊಡುವುದಿಲ್ಲ ಎನ್ನುವ ಆರೋಪ ನಮ್ಮ ಮೇಲೆ ಯಾರೂ ಮಾಡಲಾರರು. ನಾವು ಒಂದೆರಡೇ ಸಂದರ್ಭಗಳಲ್ಲಿ ಈ ಮನೆಯಲ್ಲಿ ಹೇಳಿದ್ದೇವೆ. ನೀವು ಯಾವ ವಿಷಯವನ್ನು ಚರ್ಚೆ ಮಾಡಲಿಕ್ಕೆ ಬಯಸುತ್ತೀರೋ ಆ ವಿಷಯವನ್ನು ಚರ್ಚೆ ಮಾಡಲಿಕ್ಕೆ ನಾವು ಸಿದ್ಧರಾಗಿದ್ದೇವೆಂದು ಜನೋತ್ಸವದ ಬಗ್ಗೆ ಚರ್ಚೆ ಮಾಡಬೇಕೆಂದರೆ ನಾವು ಸಿದ್ಧರಾಗಿದ್ದೇವೆ, ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಬೇಕೆಂದರೆ ಸಿದ್ಧರಾಗಿದ್ದೇವೆ, ನಮ್ಮ ಸರ್ಕಾರಿ ಉದ್ಯಮಗಳ ಬಗ್ಗೆ ಚರ್ಚೆ ಮಾಡಬೇಕೆಂದರೆ ಅದಕ್ಕೂ ಸಿದ್ಧರಾಗಿದ್ದೇವೆಂದು ಹೇಳಿದ್ದೇವೆ. ಕೇವಲ ಸಿದ್ಧರಿದ್ದೇವೆಂದು ಹೇಳುವುದಷ್ಟೇ ಅಲ್ಲ, ನಾವು ಅದನ್ನು ಸ್ವಾಗತ ಮಾಡುತ್ತೇವೆ. ನಮ್ಮ ಮನಸ್ಸಿನಲ್ಲಿ ನಮ್ಮ ಸರ್ಕಾರದ ನಮ್ಮ ದೌರ್ಭಾಗ್ಯದ ಬಗ್ಗೆ ಸಾಕಷ್ಟು ಅರಿವೂ ಕೂಡ ನವಂಗೆ ಇದೆ. ಇಂದು ನಾವು ಮಾಡಿದ್ದೇ ಸರಿ, ನಾವು ಮಾಡಿದ್ದು ಟೀಕೆಗೆ ಒಳಗಾಗಕೂಡದು ಮತ್ತು ನಮಗೆ ಮಾಡ ತಕ್ಕ ಅಧಿಕಾರ ಇದೆ. ಅದನ್ನು ಮಾಡಿ ತೋರಿಸುತ್ತೇವೆ ಎಂಬ ನಿಲುವನ್ನು ನಾವು ಎಂದೂ ತಳೆದಿಲ್ಲ. ಚರ್ಚೆಯಿಂದ ನಮಗೂ ಕೂಡ ಅನೇಕ ಸಂದರ್ಭಗಳಲ್ಲಿ ನಮ್ಮ ತಪ್ಪುಗಳು ಗೊತ್ತಾಗುತ್ತವೆ ಮತ್ತು ಮಾರ್ಗದರ್ಶನವಾಗುತ್ತದೆ. ಆದರೆ ದುರ್ದೈವದಿಂದ ನಮ್ಮ ಇವತ್ತಿನ ವಿರೋಧ ಪಕ್ಷದ ಕೆಲವು ಮಾನ್ಯ ಸದಸ್ಯರಿಗೆ ಚರ್ಚೆ ಬೇಕಾಗಿಲ್ಲ, ಅವರಿಗೆ ಪ್ರಚಾರಬೇಕು. ಯಾವುದಾದರೂ ಒಂದು ಕಾರಣದಿಂದ ಪ್ರಚಾರದ ಮುಖಾಂತರವಾಗಿ ಅಥವಾ ಅಪಪ್ರಚಾರದ ಮುಖಾಂತರವಾಗಿ ಈ ಸರ್ಕಾರದ ಮುಖಕ್ಕೆ ಮಸಿ ಬಳಿಯಬೇಕು ಎಂಬುದು ಅವರ ಉದ್ದೇಶ. ಈ ಉದ್ದೇಶ ಸಾಧನೆ ಮಾಡಲಿಕ್ಕೆ ನಾವು ಅವರಿಗೆ